ಹಾಕಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.16 ಹಾಗೂ 17 ಅವರಿಗೆ ತೊಂದರೆ ಮಾಡುವ ಉದ್ದೇಶಕ್ಕಾಗಿ ಈ ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ.

(ಪ್ರತಿವಾದಿ ನಂ.18 ಮತ್ತು 19 ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.

ದಿ:11-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟಿಸವಾಲು : ಪ್ರತಿವಾದಿ ನಂ.18 ಮತ್ತು 19 ರ ಪರ ಶ್ರೀ. ಎನ್.ವಿ.ಎಂ ವಕೀಲರಿಂದ :

1. ನಾನು 3 ನೇ ತರಗತಿಯವರೆಗೆ ಓದಿದ್ದೇನೆ. ನನಗೆ ಕನ್ನಡ ಹಾಗೂ ಇಂಗ್ಲೀಷು ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ನಾನು ಸರಿಯಾಗಿ ಓದಿ ತಿಳಿದುಕೊಂಡಿಲ್ಲ.

2. 2015 ನೇ ಇಸವಿಯಲ್ಲಿ ನಾನು ಈ ದಾವೆ ಸಲ್ಲಿಸಿದ್ದೇನೆ. ದಾವೆ ಹಾಕುವ ಸಂದರ್ಭದಲ್ಲಿ ನಾನು 18 ಹಾಗೂ 19 ನೇ ಪ್ರತಿವಾದಿಗಳನ್ನು ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. 2015 ನೇ ಇಸವಿಯಲ್ಲಿ ನಾನು 18 ಹಾಗೂ 19 ನೇ ಪ್ರತಿವಾದಿಗಳನ್ನು ಪಕ್ಷಕಾರರನ್ನಾಗಿ ಮಾಡಿಲ್ಲ ಮತ್ತು 2017 ನೇ ಇಸವಿಯಲ್ಲಿ ಅವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿದ್ದೇನೆ ಎಂದರೆ ಸಾಕ್ಷಿ ನನ್ನ ವಕೀಲರು ಮಾಡಿದ್ದಾರೆ ಎಂದು ನುಡಿಯುತ್ತಾರೆ. 18 ಹಾಗೂ 19 ನೇ ಪ್ರತಿವಾದಿಗಳನ್ನು ಪಕ್ಷಕಾರರನ್ನಾಗಿ ಮಾಡಿರುವುದು ನನಗೆ ಗೊತ್ತಿಲ್ಲ ಎಂದರೆ ಸರಿ.

3. 2002 ನೇ ಇಸವಿಯಲ್ಲಿ 15 ನೇ ಪ್ರತಿವಾದಿಯಿಂದ 18 ಹಾಗೂ 19 ನೇ ಪ್ರತಿವಾದಿಗಳಿಗೆ ಕ್ರಯ ಪತ್ರ ಆಗಿರುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನನ್ನ ತಂದೆ ಆಂಜನಪ್ಪ ಹಾಗೂ ನನ್ನ 3 ಜನ ಚಿಕ್ಕಪ್ಪಂದಿರು ಸೇರಿ ಜಯಶ್ರೀ ಅವರಿಗೆ ಕ್ರಯ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1982 ನೇ ಇಸವಿಯಲ್ಲಿ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪಂದಿರು ಸೇರಿ ಜಯಶ್ರೀ ಅವರಿಗೆ ಕ್ರಯ ಪತ್ರ ಮಾಡಿಕೊಟ್ಟ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನನಗೆ ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಮೇಲೆ ಸಾಲ ಇದ್ದ ಕಾರಣ ನನ್ನ ತಂದೆ ಹಾಗೂ ಚಿಕ್ಕಪ್ಪಂದಿರು ದಾವಾ ಆಸ್ತಿಯನ್ನು ಜಯಶ್ರೀ ಅವರಿಗೆ ಮಾರಿದ್ದರು ಎಂದರೆ ಸುಳ್ಳು.

4. ನಿ.ಪಿ.16 ಹಾಗೂ ನಿ.ಪಿ.16(ಎ) ನನ್ನ ತಂದೆ ಹಾಗೂ ಚಿಕ್ಕಪ್ಪಂದಿರು ಜಯಶ್ರೀ ಅವರಿಗೆ ಮಾರಾಟ ಮಾಡಿದ ಕ್ರಯ ಪತ್ರ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಹಾಗೂ ಚಿಕ್ಕಪ್ಪಂದಿರು ಮನೆಯ ಸಾಲವನ್ನು ತೀರಿಸುವುದಕ್ಕೋಸ್ಕರ ಹಾಗೂ ಮನೆಯ ಹೆಣ್ಣು ಮಕ್ಕಳ ಮದುವೆಗಾಗಿ ದಾವಾ ಆಸ್ತಿಯನ್ನು ಜಯಶ್ರೀ ಅವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ನನಗೆ ಮಾರಾಟ ಮಾಡಿದ ವಿಚಾರ ಗೊತ್ತಿದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1982 ನೇ ಇಸವಿಯಲ್ಲಿ ನಾನು ಹಾಗೂ ನನ್ನ ತಂದೆ ಮತ್ತು ಚಿಕ್ಕಪ್ಪಂದಿರು ಒಟ್ಟು ಕುಟುಂಬದಲ್ಲಿ ಇದ್ದೆವು ಎಂದರೆ ಸರಿಯಲ್ಲ.

5. 2002 ನೇ ಇಸವಿಯಿಂದ ಪ್ರತಿವಾದಿಗಳು ಸದರಿ ದಾವಾ ಆಸ್ತಿಯಲ್ಲಿ ಕಟ್ಟಡವನ್ನೂ ಸಹ ಕಟ್ಟಿರುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. 15 ನೇ ಪ್ರತಿವಾದಿಯಿಂದ 18 ಹಾಗೂ 19 ನೇ ಪ್ರತಿವಾದಿಗಳಿಗೆ ದಾವಾ ಆಸ್ತಿ ಈಗಾಗಲೇ ಮಾರಾಟವಾಗಿದೆ ಮತ್ತು ಈಗ ನಾನು ನೋಡುತ್ತಿರುವ ಕ್ರಯ ಪತ್ರ ಅದಕ್ಕೆ ಸಂಬಂಧಿಸಿದ್ದು ಎಂದರೆ ನನಗೆ ಗೊತ್ತಿಲ್ಲ. ಕ್ರಯ ಪತ್ರದ ಆಧಾರದಲ್ಲಿ ಕೆಂಗೇರಿ ಪುರಸಭೆಯವರು ಖಾತೆಯನ್ನೂ ಸಹ ಅವರಿಗೆ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 4 ಗುಂಟೆ ಜಮೀನು ಭೂ ಪರಿವರ್ತನೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಕಂದಾಯ ಹಾಗೂ ಆರ್.ಟಿ.ಸಿ.ಗಳು 18 ಹಾಗೂ 19 ನೇ ಪ್ರತಿವಾದಿಗಳ ಹೆಸರಿನಲ್ಲಿ ಇದೆ

ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ಆಸ್ತಿಗೆ ಬಿ.ಡಬ್ಲೂ.ಎಸ್.ಎಸ್.ಬಿ.ಯವರು ನೀರಿನ ಸಂಪರ್ಕ ನೀಡಿದ್ದಾರೆ ಮತ್ತು ಆ ವಿಚಾರ ಸಹ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನಮ್ಮ ಮನೆಯಿಂದ ದಾವಾ ಆಸ್ತಿಗೆ 25-30 ಅಡಿ ದೂರ ಇದೆ. ನಮ್ಮ ಮನೆಯ ಎದುರೇ ಶಾಮಣ್ಣ ಅವರ ಆಸ್ತಿ ಇದೆ ಎಂದರೆ ಸರಿಯಲ್ಲ.

6. ಈಗ ನಾನು ನೋಡುತ್ತಿರುವ ಫೋಟೋದಲ್ಲಿರುವ ಕಟ್ಟಡ ಶಾಮಣ್ಣ ಅವರದ್ದು ಎಂದರೆ ಸರಿ. ದಿನಾಂಕ 30.10.2015 ರಂದು ನಾನು ಅವರ ಮನೆಯ ಗೃಹ ಪ್ರವೇಶಕ್ಕೆ ಹೋಗಿದ್ದೆ ಎಂದರೆ ಸರಿಯಲ್ಲ. ಸದರಿ ಕಟ್ಟಡದ ಹೆಸರು ಶಾಮಣ್ಣ ಕಾಂಪ್ಲೆಕ್ಸ್ ಮತ್ತು ಆ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ 4 ಗುಂಟೆ ಜಾಗದಲ್ಲಿಯೂ ಕಟ್ಟಡ ಕಟ್ಟಲಾಗಿದೆ ಮತ್ತು ಆ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸದರಿ 3 ಫೋಟೋಗಳನ್ನು ನಿ.ಡಿ.39 ರಿಂದ ನಿ.ಡಿ.41 ಎಂದು ಗುರುತಿಸಲಾಯಿತು.

7. 18 ಹಾಗೂ 19 ನೇ ಪ್ರತಿವಾದಿಗಳು ದಾವಾ ಆಸ್ತಿಯನ್ನು ಬ್ಯಾಂಕಿನಲ್ಲಿ ಅಡಮಾನ ಇರಿಸಿದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಈಗ ನಾನು ನೋಡುತ್ತಿರುವ ದಾಖಲೆ 18 ಹಾಗೂ 19 ನೇ ಪ್ರತಿವಾದಿಗಳು ದಾವಾ ಆಸ್ತಿಯನ್ನು ಯುಕೋ ಬ್ಯಾಂಕಿನಲ್ಲಿ ಅಡಮಾನ ಮಾಡಿದ ದಾಖಲೆ ಎಂದರೆ ನನಗೆ ಗೊತ್ತಿಲ್ಲ. 2017 ರಲ್ಲಿ ಸದರಿ ಪ್ರತಿವಾದಿಗಳು ಸಾಲ ಹೆಚ್ಚಳಕ್ಕಾಗಿ ಪುನಃ ಅಡಮಾನ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕಟ್ಟಡದ ಮೇಲೆ ರೂ.47,00,000/- ಸಾಲ

ಇದೆ ಎಂದರೆ ನನಗೆ ಗೊತ್ತಿಲ್ಲ. 2002 ರಿಂದ 4 ಗುಂಟೆ ಸ್ಥಳ ಶಾಮಣ್ಣ ಅವರ ಸ್ವಾಧೀನದಲ್ಲೇ ಇದೆ ಎಂದರೆ ಸಾಕ್ಷಿ 2014 ರಲ್ಲಿ ನನಗೆ ಅದು ಗೊತ್ತಾಯಿತು ಎಂದು ನುಡಿಯುತ್ತಾರೆ. ನಾನು ಸರ್ವೇ ನಂ.48/1 ರಲ್ಲಿ 25 ಗುಂಟೆಗಳ ಬಗ್ಗೆ ಮಾತ್ರ ಪಾಲು ಕೇಳುತ್ತಿದ್ದೇನೆ ಎಂದರೆ ಸರಿ. ಬೇರೆ ಆಸ್ತಿಗಳು ಬಗ್ಗೆ ನಾನು ದಾವಾ ಸಲ್ಲಿಸಿಲ್ಲ ಎಂದರೆ ನಾನು ಗೊತ್ತಿರುವ ಆಸ್ತಿಯ ಮೇಲೆ ಮಾತ್ರ ದಾವಾ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ.

8. ಈಗ ನಾನು ವಾಸ ಮಾಡುತ್ತಿರುವ ಮನೆ ಸ್ವಂತದ್ದು. ನಾನು ಇರುವ ಮನೆಯ ವಿಸ್ತೀರ್ಣ 20*25 ಅಡಿ. ನನ್ನ ಚಿಕ್ಕಪ್ಪಂದಿರೂ ಸಹ ಅವರವರ ಸ್ವಂತ ಮನೆಯಲ್ಲೇ ವಾಸ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ಮನೆಗಳಲ್ಲಿ ವಿಭಾಗ ಆಗಬೇಕು ಎಂದು ನಾನು ದಾವೆ ಸಲ್ಲಿಸಿಲ್ಲ ಎಂದರೆ ಸರಿ. 18 ಹಾಗೂ 19 ನೇ ಪ್ರತಿವಾದಿಗಳು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದು ಅವರಿಗೆ ನಾನು ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.